ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 000095
Bangalore Development Authority

ಸಂಖ್ಯೆ :
No. : ಬೆಂಅಪ್ರಾ/ನಯೋಸ/PL-46/2017-18/ 346 /2018-19.

ದಿನಾಂಕ :
Date : 03/06/2019

# ಕಾರ್ಯಾದೇಶ

ವಿಷಯ:- ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ 11 ರಲ್ಲಿನ 19ಎಕರೆ-18ಗುಂಟೆ ವಿಸ್ತೀರ್ಣದ ಪೈಕಿ 14ಎಕರೆ-14ಗುಂಟೆ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡುವಂತೆ ಅರ್ಜಿದಾರರಾದ ಮೆ॥ ಸೂಪರ್ ಸೈಬರ್ ಟೆಕ್ ಪಾರ್ಕ್ ಪ್ರೈ ಲಿ., ರವರು ಕೋರಿರುವ ಬಗ್ಗೆ.

ಉಲ್ಲೇಖ

1. ಅರ್ಜಿದಾರರ ಮನವಿ ದಿನಾಂಕ 26.09.2014.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 47/2018, ದಿನಾಂಕ 05.03.2018.
3. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-46/2017-18/1610/2018-19., ದಿನಾಂಕ 11.12.2018.
4. ಕೆನರಾ ಬ್ಯಾಂಕ್ ಚಲನ್ ನಂ. 50924. ದಿನಾಂಕ 15.12.2018 ಆರ್ಥಿಕ ಸದಸ್ಯರವರು ದಿನಾಂಕ 21.12.2018 ರಂದು ದೃಢೀಕರಿಸಿರುವುದು.
5. ಈ ಕಛೇರಿ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/PRL-46/2017-18/1852/2018-19, ದಿನಾಂಕ 29.01.2019.
6. ಅಧಿಕ ಜಿಲ್ಲಾ ನೊಂದಣಾದಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಅಪ್ರಾ ರವರ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪರಿತ್ಯಾಜನಾ ಪತ್ರ BDA-1-08707-2018-19, ಸಿ.ಡಿ. ನಂ. BDAD272, ದಿನಾಂಕ 20.02.2019.
7. ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ, ಎಂ.ಆರ್.ಟಿ.ಎಸ್. ಕರ, ಮೆಟ್ರೋ ಕರ ಮತ್ತು ವಿವಿಧ ಶುಲ್ಕಗಳ ಪರಿಷ್ಕೃತ ದರವನ್ನು ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರುವುದಾಗಿ ದಿನಾಂಕ 18.12.2018 ರಂದು ನೀಡಿರುವ ನೋಟರೈಸ್ಡ್ ಪ್ರಮಾಣ ಪತ್ರ.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ 11 ರಲ್ಲಿನ 19ಎಕರೆ-18ಗುಂಟೆ ವಿಸ್ತೀರ್ಣದ ಪೈಕಿ 14ಎಕರೆ-14ಗುಂಟೆ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಂತೆ ಉಲ್ಲೇಖ [1] ರಲ್ಲಿ ಮೆ॥ ಸೂಪರ್ ಸೈಬರ್ ಟೆಕ್ ಪಾರ್ಕ್ ಪ್ರೈ ಲಿ., ರವರು ವಸತಿ ಬಡಾವಣೆ ನಕ್ಷೆ ಅನುಮೋದಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಉಲ್ಲೇಖ [2] ರ ದಿನಾಂಕ 05.03.2018 ರಂದು ಜರುಗಿದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ 47/2018 ರಲ್ಲಿ ಮಂಡಿಸಲಾಗಿತ್ತು. ಚರ್ಚೆಯ ನಂತರ ಉದ್ದೇಶಿತ ಬಡಾವಣೆ ನಕ್ಷೆಯಲ್ಲಿ ಪಶ್ಚಿಮ ಭಾಗದಲ್ಲಿ ಉದ್ಯಾನವನಕ್ಕೆ ಹಲವು ಸಣ್ಣ ವಿಸ್ತೀರ್ಣದ ಪ್ರದೇಶಗಳನ್ನು ಪ್ರಸ್ತಾಪಿಸಿದ್ದು, ಇದು ಸೂಕ್ತವಲ್ಲ. ಇಂತಹ ಸಣ್ಣ ಪ್ರದೇಶಗಳು ಉದ್ಯಾನವನದ ಉದ್ದೇಶಕ್ಕೆ ಸದುಪಯೋಗವಾಗುವುದಿಲ್ಲ. ಹಾಗೂ ರಸ್ತೆ ಪರಿಚಲನೆಯನ್ನು ಉತ್ತಮಪಡಿಸುವ ಅವಶ್ಯಕತೆ ಇರುವುದು. ಅರ್ಜಿದಾರರು ಭೂಪರಿವರ್ತನೆಯಾದ ಒಟ್ಟು ವಿಸ್ತೀರ್ಣದಲ್ಲಿ ಭಾಗಶಃ ವಿಸ್ತೀರ್ಣಕ್ಕೆ ಬಡಾವಣೆ ನಕ್ಷೆ ಕೋರಿದ್ದು, ಉಳಿಕೆ ಪ್ರದೇಶವನ್ನು ಮುಂದೆ ಅನುಮೋದಿಸಿಕೊಳ್ಳುವ ಬಗ್ಗೆ ಕೋರಿರುತ್ತಾರೆ. ಸಮಿತಿಯು ಈ ಬಗ್ಗೆ ಪರಿಶೀಲಿಸಿ ಉಳಿಕೆ ಪ್ರದೇಶಕ್ಕೆ ನಿಯಮದಂತೆ ನಕ್ಷೆ ಅನುಮೋದಿಸಿಕೊಳ್ಳುವ ಷರತ್ತಿಗೊಳಪಟ್ಟು 14 ಎಕರೆ-14ಗುಂಟೆಗೆ (ಭಾಗಶಃ) ಬಡಾವಣೆ ನಕ್ಷೆಯನ್ನು ಅನುಮೋದಿಸಲು ತೀರ್ಮಾನಿಸಿತು.

ಉಲ್ಲೇಖ [2] ರ ಸಮಿತಿ ಸಭೆಯ ತೀರ್ಮಾನದಂತೆ ವಸತಿ ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ [3] ರ ಪತ್ರದಲ್ಲಿ ವಿವಿಧ ಶುಲ್ಕಗಳ ಬಾಬ್ತು ₹. 43,75,600/- [₹. ನಲವತ್ತಮೂರು ಲಕ್ಷದ ಎಪ್ಪತ್ತೈದು ಸಾವಿರದ ಆರು ನೂರು ಮಾತ್ರ] ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ತಿಳಿಸಲಾಗಿತ್ತು.

ಅರ್ಜಿದಾರರು ದಿನಾಂಕ 15.12.2018 ರಂದು ಉಲ್ಲೇಖ [4] ರಲ್ಲಿ ₹. 43,75,600/- [₹. ನಲವತ್ತಮೂರು ಲಕ್ಷದ ಎಪ್ಪತ್ತೈದು ಸಾವಿರದ ಆರು ನೂರು ಮಾತ್ರ] ಗಳನ್ನು ಕೆನರಾ ಬ್ಯಾಂಕ್ ನ ಚಲನ್ ನಂ. 50924 ರ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಸದರಿ ಮೊತ್ತವು ಪ್ರಾಧಿಕಾರದ ಲೆಕ್ಕ ಶೀರ್ಷಿಕೆಯಲ್ಲಿ ಸಂದಾಯವಾಗಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 31.12.2018 ರಂದು ದೃಢೀಕರಿಸಿರುತ್ತಾರೆ.

ಉಲ್ಲೇಖ [5] ರಂತೆ ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು ಮತ್ತು ರಸ್ತೆ ಪ್ರದೇಶಗಳನ್ನು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳುವಂತೆ ಕಾರ್ಯಪಾಲಕ ಅಭಿಯಂತರರು [ಪೂರ್ವ ವಿಭಾಗ], ಹೆಚ್.ಎಸ್.ಆರ್. ಬಡಾವಣೆಯ ವಾಣಿಜ್ಯ ಸಂಕೀರ್ಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ತಿಳಿಸಲಾಗಿತ್ತು.

ಕಾರ್ಯಪಾಲಕ ಅಭಿಯಂತರರು [ಪೂರ್ವ ವಿಭಾಗ], ಹೆಚ್.ಎಸ್.ಆರ್ ಬಡಾವಣೆಯ ವಾಣಿಜ್ಯ ಸಂಕೀರ್ಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಉಲ್ಲೇಖ [6] ರಂತೆ ತಾತ್ಕಾಲಿಕ ಕರಡು ವಸತಿ ಬಡಾವಣೆ ನಕ್ಷೆಯಲ್ಲಿನ ಉದ್ಯಾನವನ / ಬಯಲುಜಾಗಗಳು ಮತ್ತು ರಸ್ತೆ ಪ್ರದೇಶಗಳನ್ನು ದಿನಾಂಕ 20.02.2019 ರಂದು ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಕೊಂಡಿರುತ್ತಾರೆ.

ಸರ್ಕಾರದ ಆದೇಶಕ್ಕೆ ಅನುಗುಣವಾಗಿ ಉಲ್ಲೇಖ [7] ರಲ್ಲಿ ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲು ಕರ, ಮೆಟ್ರೋಕರ, ವಿವಿಧ ಶುಲ್ಕಗಳ ಪರಿಷ್ಕರಣೆ ದರ ಮತ್ತು ಎಂ.ಆರ್.ಟಿ.ಎಸ್. ಕರಗಳನ್ನು ಪಾವತಿಸಲು ಬದ್ಧರಾಗಿರುವುದಾಗಿ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ದಿನಾಂಕ 18.12.2018 ರಂದು ಅರ್ಜಿದಾರರು ನೀಡಿರುತ್ತಾರೆ.

ಸಮಿತಿ ಸಭೆಯ ತೀರ್ಮಾನದಂತೆ ಉದ್ಯಾನವನ ಮತ್ತು ಬಯಲು ಜಾಗವನ್ನು ನಕ್ಷೆಯ 2 ಪ್ರದೇಶಗಳಲ್ಲಿ ದೊಡ್ಡದಾಗಿ ತೋರಿಸಿರುತ್ತಾರೆ. ರಸ್ತೆ ಪರಿಚಲನೆಯನ್ನು ಉತ್ತಮಪಡಿಸಿ ನಕ್ಷೆ ನೀಡಿರುತ್ತಾರೆ. ಹಾಗೂ ವಾಸದ ಉದ್ದೇಶಕ್ಕೆ ಪರಿಷ್ಕೃತ ಭೂ ಪರಿವರ್ತನಾ ಆದೇಶವನ್ನು ಜಿಲ್ಲಾಧಿಕಾರಿಗಳಿಂದ ದಿನಾಂಕ 02.05.2019 ರಂದು ಪಡೆದು ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡನಾಗಮಂಗಲ ಗ್ರಾಮದ ಸರ್ವೆ ನಂ 11 ರಲ್ಲಿನ 19ಎಕರೆ-18ಗುಂಟೆ ವಿಸ್ತೀರ್ಣದ ಪೈಕಿ 14 ಎಕರೆ-14ಗುಂಟೆ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಲಾಗಿದೆ.

| | |
|---|---|
| 1. | ಸದರಿ ಪ್ರದೇಶಕ್ಕೆ ಲಗತ್ತಾಗಿರುವ ಉಪಗಮನ ರಸ್ತೆಯನ್ನು ಅರ್ಜಿದಾರರ ಪ್ರದೇಶದ ಎರಡೂ ಬದಿಗಳಲ್ಲಿ ಕನಿಷ್ಠ 100 ಮೀ. ಉದ್ದಕ್ಕೆ ಅರ್ಜಿದಾರರ ಸ್ವಂತ ಖರ್ಚಿನಲ್ಲಿ ಅಭಿವೃದ್ಧಿ ಪಡಿಸತಕ್ಕದ್ದು. |
| 2. | ಸದರಿ ಪ್ರದೇಶದಲ್ಲಿರುವ ಶೆಡ್ ಗಳನ್ನು ಬಡಾವಣೆ ನಿರ್ಮಿಸುವ ಸಮಯದಲ್ಲಿ ತೆರವುಗೊಳಿಸತಕ್ಕದ್ದು. |
| 3 | ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯಂತೆ ವಿವಿಧ ಅಳತೆಯ ಒಟ್ಟು 207 ವಸತಿ ನಿವೇಶನಗಳಿದ್ದು [EWS ಒಳಗೊಂಡಂತೆ], ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ನಿವೇಶನಗಳ ಅಳತೆ ಹಾಗೂ ನಿವೇಶನಗಳ ಒಟ್ಟು ಸಂಖ್ಯೆಯನ್ನು ಅನುಮೋದಿತ ಬಡಾವಣೆ ನಕ್ಷೆಯಲ್ಲಿ ಬದಲಾಯಿಸತಕ್ಕದ್ದಲ್ಲ. ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಮಾಡಿ ಮನೆ ಕಟ್ಟಿದಲ್ಲಿ ಅದಕ್ಕೆ ಅರ್ಜಿದಾರರೇ ಹೊಣೆಯಾಗಬೇಕಾಗುತ್ತದೆ. |
| 4 | ಅನುಮೋದಿತ ಬಡಾವಣೆ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು, ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಗಳನ್ನು ಮಾಡುವಂತಿಲ್ಲ. |
| 5 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ತ್ಯಾಜ್ಯ ನೀರು, ವಿಲೇವಾರಿ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸತಕ್ಕದ್ದು ಹಾಗೂ ಉದ್ದೇಶಿತ ವಸತಿ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿತೋರಿಸತಕ್ಕದ್ದು. |
| 6 | ಉದ್ಯಾನವನ ಮತ್ತು ಬಯಲುಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಶೇ.100/- ರಷ್ಟು ನಿವೇಶನಗಳ ಬಿಡುಗಡೆಗೊಳಿಸುವ ಮೊದಲು Chain link Fencing ಮಾಡಿ ಅಳವಡಿಸುವುದು ಹಾಗೂ ಅಭಿವೃದ್ಧಿ ಪಡಿಸುವುದು. |
| 7 | ವಸತಿ ಬಡಾವಣೆ ನಕ್ಷೆ ತೋರಿಸಿರುವ ರಸ್ತೆ ಅಗಲವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡಬಾರದು. |
| 8 | Buffer ಪ್ರದೇಶದಲ್ಲಿ ಗಿಡ-ಮರಗಳನ್ನು ಬೆಳಸತಕ್ಕದ್ದು |

| | |
|---|---|
| 9 | ಅರ್ಜಿದಾರರು ಉದ್ದೇಶಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |
| 10 | ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸುಳ್ಳು ದಾಖಲೆ ಅಥವಾ ಇನ್ನಿತರೆ ಫೋರ್ಜರಿ ದಾಖಲಾತಿಗಳನ್ನು ನೀಡಿರುವುದು ರುಜುವಾತಾದಲ್ಲಿ ಈಗ ನೀಡಿರುವ ಬಡಾವಣೆ ನಕ್ಷೆ ಅನುಮೋದನೆಯು ತನ್ನಿಂದತಾನೆ ರದ್ದಾಗುವುದೆಂದು ಭಾವಿಸತಕ್ಕದ್ದು. |
| 11 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ದರಾಗಿರುವುದು. |
| 12 | ಪ್ರಸ್ತಾಪಿತ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು, ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ. Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು. |
| 13 | ವಸತಿ ವಿನ್ಯಾಸದಲ್ಲಿ ಎಲ್ಲಾ ರಸ್ತೆಗಳನ್ನು IRC Specification ಪ್ರಕಾರ ಅಭಿವೃದ್ಧಿ ಪಡಿಸತಕ್ಕದ್ದು, ಅದಕ್ಕೂ ಮುಂಚೆ ಅಂದಾಜುಪಟ್ಟಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದಿಂದ ಅನುಮೋದಿಸಿಕೊಳ್ಳತಕ್ಕದ್ದು, ರಸ್ತೆ ಅಭಿವೃದ್ಧಿ ಪಡಿಸುವ ಸಮಯದಲ್ಲಿ ಅಭಿಯಂತರ ವಿಭಾಗದಿಂದ ಸ್ಥಳ ಪರಿಶೀಲನೆಗಾಗಿ ಮತ್ತು ಕಾಮಗಾರಿ ಪರಿಶೀಲನೆಗೆ ಅನುವುಮಾಡಿಕೊಡತಕ್ಕದ್ದು. |
| 14 | ಬಡಾವಣೆಯಲ್ಲಿನ ಪ್ರತಿ ನಿವೇಶನದಲ್ಲಿ ಮನೆ ನಿರ್ಮಿಸುವ ಸಮಯದಲ್ಲಿ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸಕ್ಕದ್ದು. |
| 15 | ಸರ್ಕಾರದ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 24 ಶಾಸನ 2015, ಬೆಂಗಳೂರು, ದಿನಾಂಕ: 10/09/2015 ರನ್ವಯ ವಿನ್ಯಾಸವನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಿದ ನಂತರ, ಅಂತಿಮವಾಗಿ ವಿನ್ಯಾಸವನ್ನು ಬಿಡುಗಡೆಗೊಳಿಸಲಾಗುವುದು. |
| 16 | ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಪೂರ್ವಭಾವಿಯಾಗಿ ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯತಕ್ಕದ್ದು. |
| 17 | ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಕಾರ್ಯಗತ ಮಾಡತಕ್ಕದ್ದು. |
| 18 | ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಉಳಿದ ಬಳಕೆಗಾಗಿ ಬಳಸತಕ್ಕದು. |

| | |
|---|---|
| 19 | ಕಾವೇರಿ ನೀರಿನ ಕರ, ವರ್ತುಲ ರಸ್ತೆ ಮೇಲುಕರ ಹಾಗೂ ಎಂ.ಆರ್.ಟಿ.ಎಸ್.ಕರಗಳ ಸಂಬಂಧ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು. |
| 20 | ಬಡಾವಣೆಯಲ್ಲಿನ ಪ್ರತಿ ನಿವೇಶನಕ್ಕೆ ಗೃಹ ಬಳಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಗಳನ್ನು ಒದಗಿಸತಕ್ಕದ್ದು. ಕುಡಿಯುವ ನೀರು ಮತ್ತು ಇತರೆ ಉಪಯೋಗಗಳಿಗೆ Dual Piping System ಅಳವಡಿಸುವುದು. |
| 21 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 22 | BESCOM ನಿರ್ದೇಶನದಂತೆ ಬಡಾವಣೆಯಲ್ಲಿ ವಿದ್ಯುಚ್ಛಕ್ತಿ ಅಳವಡಿಸಲು ಕ್ರಮ ಕೈಗೊಳ್ಳತಕ್ಕದ್ದು. |
| 23 | ಮಾನ್ಯ ಉಚ್ಚ ನ್ಯಾಯಾಲಯದ WP No.41129/2015, ದಿನಾಂಕ.30/09/2015 ರ ಆದೇಶದಂತೆ ಮೆಟ್ರೋ ಸೆಸ್ ಪಾವತಿಸುವ ಸಂಬಂಧ ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಿರತಕ್ಕದ್ದು. |
| 24 | ಸದರಿ ವಸತಿ ವಿನ್ಯಾಸದಲ್ಲಿ ಪ್ರಾಧಿಕಾರದ ದಿನಾಂಕ.08/11/2010 ರ ಸುತ್ತೋಲೆಯಂತೆ ಒಟ್ಟು ವಸತಿ ನಿವೇಶನಗಳ ಶೇ.10 ರಷ್ಟು ವಸತಿ ನಿವೇಶನಗಳನ್ನು (EWS) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಮತ್ತು (LIG) ಕಡಿಮೆ ಆದಾಯ ವರ್ಗದವರಿಗಾಗಿ ಕಾಯ್ದಿರಿಸಕ್ಕದ್ದು, ಹಾಗೂ ಈ ವರ್ಗದವರಿಗೆ EWS ನಿವೇಶನವನ್ನು ಹಂಚಿಕೆ ಮಾಡತಕ್ಕದ್ದು. (EWS) ಆರ್ಥಿಕ ದುರ್ಬಲ ವರ್ಗದವರಿಗಾಗಿ ಕಾಯ್ದಿರಿಸಿದ ನಿವೇಶನಗಳನ್ನು ಒಂದುಗೂಡಿಸಿ ದೊಡ್ಡ ಅಳತೆಯ ನಿವೇಶನವನ್ನಾಗಿ ಸಮಾಮೇಲನಾ ಮಾಡಿದ್ದಲ್ಲಿ ಮೂಲ ಆಶಯ ವಿಫಲವಾಗುವುದರಿಂದ (EWS) ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಕಾಯ್ದಿರಿಸಿದ ವಸತಿ ನಿವೇಶನಗಳನ್ನು ಸಮಾಮೇಲನಾ ಮಾಡತಕ್ಕದ್ದಲ್ಲ. |
| 25 | BWSSB, BESCOM ಇಲಾಖೆಗಳಿಂದ ಹಾಗೂ ಅಗತ್ಯಕನುಗುಣವಾಗಿ KSPCB ಪಡೆದ NOC ಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 26 | ಬಡಾವಣೆ ನಕ್ಷೆಯಲ್ಲಿ Transformer Yard, RWH, STP ಗಳಿಗಾಗಿ ಸೂಕ್ತಜಾಗಗಳನ್ನು ಕಾಯ್ದಿರಿಸಿದ್ದು ಇವುಗಳನ್ನು ಬದಲಾಯಿಸುವಂತಿಲ್ಲ ಹಾಗೂ ಸಂಬಂಧಪಟ್ಟ ಸಂಸ್ಥೆಯ ಅಭಿಪ್ರಾಯದಂತೆ ಅಭಿವೃದ್ಧಿಪಡಿಸುವುದು. |
| 27 | ಉಳಿಕೆ 05 ಎಕರೆ 04 ಗುಂಟೆ ಪ್ರದೇಶಕ್ಕೆ ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಂತೆ ನಿಯಮಾನುಸಾರ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಪ್ರಾಧಿಕಾರದ ಅನುಮೊದನೆಯಿಲ್ಲದೆ ಈ ಪ್ರದೇಶವನ್ನು ಅಭಿವೃದ್ಧಿ, ವಿಭಜನೆ, ಪರಭಾರೆ ಮಾಡತಕ್ಕದ್ದಲ್ಲ. ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಬದ್ಧರಿರತಕ್ಕದ್ದು. |

| | |
|---|---|
| 28 | ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,

ಶ್ರೀ ಲೋಕೇಶ್. ಎಸ್.
[ಆಥರೈಸ್ಡ್ ಸಿಗ್ನೇಟರಿ],
M/S. Super Syber Teck park [Pvt.] Ltd.,
# 60/1, 2 ನೇ ಕ್ರಾಸ್, ರೆಸಿಡೆನ್ಸಿ ರಸ್ತೆ,
ಬೆಂಗಳೂರು - 560 025.